**ದಿಃ24.07.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಕೆ.ಎಸ್.ಸಿ ವಕೀಲರಿಂದ ಃ**

ದಾವಾ ಸ್ವತ್ತನ್ನು ಅಳತೆ ಮಾಡುವ ಪೂರ್ವದಲ್ಲಿ ಆಜು-ಬಾಜು ಆಸ್ತಿದಾರರಾದ ಸರ್ವೆ ನಂ.46/1, 48, 49, 50, 53/10 ಮತ್ತು 58/7 ರವರಿಗೆ ನೋಟೀಸ್ಸು ಜಾರಿ ಮಾಡಿಲ್ಲ. ಸಾಕ್ಷಿ ಮುಂದುವರೆದು ಅರ್ಜಿದಾರರು ಮೇಲೆ ಹೇಳಿದ ಸರ್ವೆ ನಂಬರುಗಳಲ್ಲಿ ಆಸ್ತಿ ಹೊಂದಿದ್ದವರಿಗೆ ನೋಟೀಸ್ಸು ಕೊಡುವಂತೆ ಅಗತ್ಯ ಶುಲ್ಕವನ್ನು ಪಾವತಿ ಮಾಡಿ ಕೇಳಿಕೊಂಡಿರಲಿಲ್ಲ ಎನ್ನುತ್ತಾರೆ. ಸರ್ವೆ ಮ್ಯಾನುವಲ್ ಪ್ರಕಾರ ಮೇಲೆ ಹೇಳಿದ ಆಸ್ತಿದಾರರರಿಗೆ ಸರ್ವೆ ಪೂರ್ವದಲ್ಲಿ ನೋಟೀಸ್ಸು ಕೊಡಬೇಕಾದದ್ದು ಕಡ್ಡಾಯ ನಿಯಮ ಎಂದರೆ ಸರಿಯಲ್ಲ. ನಾನು ಸರ್ವೆ ಕಾರ್ಯಕ್ಕೆ ಪ್ಲೆನ ಟೇಬಲ್ ಮತ್ತು ಚೈನನ್ನು ಉಪಯೋಗಿಸಿದ್ದೆ. ವರದಿಯಲ್ಲಿ ಎಷ್ಟು ಜೋಡನೆಯ ಚೈನನ್ನು ಉಪಯೋಗಿಸಿದ್ದೆ ಎಂದು ಹೇಳಿಲ್ಲ ಎಂದರೆ ಸರಿ. ಅಳತೆ ಕಾಲಕ್ಕೆ ಸ್ಥಳದಲ್ಲಿ ನಾನು ಯಾವುದೇ ಕಚ್ಚಾ ನಕಾಶೆಯನ್ನು ತಯಾರಿಸಿಲ್ಲ. ಸಾಕ್ಷಿ ಮುಂದುವರೆದು ಪಿ.ಟಿ.ಶೀಟನ್ನು ತಯಾರಿಸಿದ್ದೇನೆ ಎನ್ನುತ್ತಾರೆ. ವಿವಾದಿತ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ ವಿವಾದಿತ ಜಾಗವನ್ನು ಗ್ರಾಮ ನಕಾಶೆಯೊಂದಿಗೆ ತುಲನೆ ಮಾಡಿ ನೋಡಲು ನಿಮಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಪಿ.ಟಿ.ಶೀಟನ್ನೆ ಗ್ರಾಮ ನಕಾಶೆಯೊಂದಿಗೆ ಹೋಲಿಸಿ ನೋಡಿರುತ್ತೇನೆ

24-07-26

ಎನ್ನುತ್ತಾರೆ. ಈ ವಿಚಾರವನ್ನು ವರದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಹದ್ದುಬಸ್ತು ಸರ್ವೆ ಕಾಲಕ್ಕೆ ಎರಡು ಶಾಶ್ವತ ಗಡಿ ಗುರುತುಗಳನ್ನು ಗುರುತಿಸಿ ಅಳತೆ ಮಾಡಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರಂತೆ ನಾನು ಅಳತೆ ಮಾಡಿದ್ದೇನೆ ಎನ್ನುತ್ತಾರೆ. ನಿಪಿ.13 ರಲ್ಲಿ ಆ ರೀತಿ ಶಾಶ್ವತ ಗಡಿ ಗುರುತು ಕಂಡುಕೊಂಡಿರುವುದು ಕಾಣಿಸುತ್ತಿಲ್ಲ ಎಂದರೆ ಸರಿ. ಸರ್ವೆ ನಂ.46/1 ಮತ್ತು 48 ರ ಉತ್ತರ ದಿಕ್ಕಿನ ಗಡಿ ಗ್ರಾಮ ಠಾಣಾದ ಗಡಿ ಎಷ್ಟು ಚೈನ್ ಲಿಂಕ್ ಅಂತರದಲ್ಲಿ ಇದೆ ಎಂದು ನಿಪಿ.13 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಶಾಶ್ವತ ಗಡಿ ಕಲ್ಲು ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ನಿಪಿ.13 ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ. ಅಳತೆ ಕಾರ್ಯವನ್ನು ಸರ್ವೆ ನಂ.46/1 ಮತ್ತು 48 ರ ಮೇಲಿನಿಂದ ಮಾಡಲಾಗಿದೆಯೊ ಅಥವಾ ಕೆಳಗಡೆಯಿಂದ ಮಾಡಲಾಗಿದೆಯೊ ಎಂದು ನಿಪಿ.13 ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ. ಸರ್ವೆ ನಂ.53/8 ಮತ್ತು 53/9 ರ ಆಸ್ತಿಗಳನ್ನು ಅಳತೆ ಮಾಡಿದ ಕಾಲಕ್ಕೆ ಅದರ ಸುತ್ತ ಸುತ್ತಳತೆ ಎಷ್ಟು ಚೈನ್ ಲಿಂಕ್ ನ್ನು ಅವರಿಸಿತ್ತು ಎಂದು ನಿಪಿ.13 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸರ್ವೆ ನಂ.46/1 ರ ಗಡಿಯಿಂದ ಸರ್ವೆ ನಂ.53/8 ಮತ್ತು 53/9 ರ ಆಸ್ತಿಗಳು ಎಷ್ಟು ಚೈನ್ ಲಿಂಕ್ ದೂರದಲ್ಲಿ ಇವೆ ಎಂದು ನಿಪಿ.13 ರಲ್ಲಿ ಸ್ಪಷ್ಟಪಡಿಸಿಲ್ಲ. ನಾನು ವಿವಾದಿತ ಆಸ್ತಿಯನ್ನು ಅಳತೆ ಮಾಡುವ ಪೂರ್ವದಲ್ಲಿ ವಾದಿ ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿ ಇದ್ದರು ಎಂದು ಗುರುತಿಸಿಕೊಂಡಿಲ್ಲ.

24-07-26

ಅದೇ ರೀತಿ ಅಳತೆ ಪೂರ್ವದಲ್ಲಿ ಆಜು-ಬಾಜುದಾರರು ಎಷ್ಟೆಷ್ಟು ವಿಸ್ತೀರ್ಣದಲ್ಲಿ ವಾಸ್ತವವಾಗಿ ಸ್ವಾಧೀನದಲ್ಲಿ ಇದ್ದರು ಎಂದು ಗುರುತಿಸಿಕೊಂಡಿಲ್ಲ. ಅಳತೆ ಪೂರ್ವದಲ್ಲಿ ವಿವಾದಿತ ಜಾಗ ಇಳಿಜಾರಿನಲ್ಲಿ ಇದೇಯೊ ಅಥವಾ ಸಮತಟ್ಟಾಗಿದೆಯೊ ಎಂದು ನಿಪಿ.13 ರಲ್ಲಿ ಹೇಳಿಲ್ಲ ಎಂದರೆ ಸರಿ. ನಿಪಿ.13 ರಲ್ಲಿ ವಿವಾದಿತ ಸ್ಥಳದಲ್ಲಿ ಕಾಫಿ ಗಿಡ ಇದೆಯೊ ಅಥವಾ ಯಾವುದಾದರೂ ಕಟ್ಟಡ ಇದೇಯೊ ಎಂದು ವರ್ಣನೆ ಮಾಡಿದೀರಾ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಳತೆ ಕಾಲಕ್ಕೆ ವಿವಾದಿತ ಸ್ಥಳದಲ್ಲಿ ಕಾಫಿ ಗಿಡ ಇತ್ತು ಎನ್ನುತ್ತಾರೆ. ಅಳತೆ ಕಾಲಕ್ಕೆ ವಿವಾದಿತ ಸ್ಥಳದಲ್ಲಿ ಬೇಲಿ ಇತ್ತು. ಆ ವಿಚಾರವನ್ನು ನಿಪಿ.13 ರಲ್ಲಿ ಉಲ್ಲೇಖಿಸಿಲ್ಲ. ಅಳತೆ ಕಾಲಕ್ಕೆ ವಿವಾದಿತ ಸ್ಥಳದಲ್ಲಿ ಇದ್ದ ಕಾಫಿ ಗಿಡಗಳು ಅಂದಾಜು 5 ವರ್ಷದ ಪ್ರಾಯದವು. ವಾದಿ ಸ್ವಾಧೀನದಲ್ಲಿ ಇದ್ದ ಆಸ್ತಿಯಲ್ಲಿ ಸಹ ಕಾಫಿ ಗಿಡಗಳು ಇದ್ದವು. ಸದರಿ ಕಾಫಿ ಗಿಡಗಳು ಸಮಾರು 10 ವರ್ಷದ ಪ್ರಾಯದವು ಆಗಿದ್ದವು. ಒತ್ತುವರಿ ಆಗಿದೆ ಎಂದು ಹೇಳಲಾದ ಜಾಗ ಸರ್ವೆ ನಂ.46/1 ರ ಜಾಗವಾಗಿದ್ದು ಅದರಲಿಲ 60 ರಿಂದ 70 ವರ್ಷದ ಕಾಫಿ ಗಿಡಗಳು ಇದ್ದಾವೆ ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ಸ್ಥಳೀಯರನ್ನು ಪಂಚರನ್ನಾಗಿಸಿಕೊಂಡಿರಲಿಲ್ಲ. ಸಾಕ್ಷಿ ಮುಂದುವರೆದು ಹದ್ದುಬಸ್ತು ಸರ್ವೆಗೆ ಪಂಚಸಾಕ್ಷಿಗಳನ್ನು ಬರಮಾಡಿಕೊಳ್ಳುವ ನಿಯಮ ಇಲ್ಲ ಎನ್ನುತ್ತಾರೆ. ನನ್ನ ಸಹಾಯಕ್ಕೆ ಪೂವಯ್ಯ ಎಂಬುವವರು ಬಂದಿದ್ದರು.

24-07-26

ಸದರಿಯವರು ನಿಪಿ.10 ರಲ್ಲಿ ಸಹಿ ಮಾಡಿಲ್ಲ. ನಿಪಿ.10 ರ ಮಹಜರ್ ನಲ್ಲಿ ಯಾವ ಮಾದರಿಯ ಚೈನನ್ನು ಉಪಯೋಗಿಸಿದ್ದೇನೆ ಎಂದು ತಿಳಿಸಿಲ್ಲ ಎಂದರೆ ಸರಿ. ಸರ್ವೆ ಮ್ಯಾನುವಲ್ ಪ್ರಕಾರ ಅಳತೆ ಪೂರ್ವದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಗೆರೆ ಹಾಕುವ ಮುಖಾಂತರ ಕೇಂದ್ರಬಿಂದುವನ್ನು ಗುರುತಿಸಿಕೊಳ್ಳಬೇಕು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ.13 ರಲ್ಲಿ ಆ ರೀತಿ ಗೆರೆ ಹಾಕಿಕೊಂಡಿಲ್ಲ ಎನ್ನುತ್ತಾರೆ. ಉತ್ತರದಿಂದ ದಕ್ಷಿಣಕ್ಕೆ ಎಳೆಯುವ ಕೇಂದ್ರಬಿಂದು ಗೆರೆಗೆ AB ಎಂದು ಗುರುತು ಕೊಡಬೇಕು ಎಂದರೆ ಸರಿಯಲ್ಲ. ಮಧ್ಯದಿಂದ ದಕ್ಷಿಣಕ್ಕೆ ಗೆರೆ ಎಳೆದುಕೊಂಡು ಅದಕ್ಕೆ DC ಎಂದು ಗುರುತು ಕೊಡಬೇಕು ಎಂದರೆ ಸಾಕ್ಷಿ ಪ್ಲೇನ್ ಟೇಬಲ್ ಸರ್ವೆಯಲ್ಲಿ ಆ ಪದ್ಧತಿ ಇಲ್ಲ ಎನ್ನುತ್ತಾರೆ. ಎ ಯಿಂದ ಸಿ ಮತ್ತು ಬಿ ಯಿಂದ ಸಿ ಬಿಂದುಗಳನ್ನು ಜೋಡಣೆ ಮಾಡಿದರೆ ವಿವಾದಿತ ಸ್ಥಳ ಕಂಡುಕೊಳ್ಳಬಹುದು ಎಂದು ಸರ್ವೆ ಮ್ಯಾನುವಲ್ ನನಲ್ಲಿ ನಿಯಮ ಇದೆ ಎಂದರೆ ಸಾಕ್ಷಿ ಪ್ಲೇನ್ ಟೇಬಲ್ ಸರ್ವೆಯಲ್ಲಿ ಅದು ಅನ್ವಯವಾಗುವುದಿಲ್ಲ ಎನ್ನುತ್ತಾರೆ. ಸರ್ವೆ ನಂ.53/8 ಮತ್ತು 53/9 ರ ನಾನು ಕೊಟ್ಟಿರುವ ನಕಾಶೆ ಗ್ರಾಮ ನಕಾಶೆಗೆ ಹೊಂದಾಣಿಕೆ ಆಗುತ್ತಿಲ್ಲ ಎಂದರೆ ಸರಿಯಲ್ಲ. ಗ್ರಾಮ ನಾಕಶೆಯನ್ನು 1918 ರಲ್ಲಿ ತಯಾರಿಸಲಾಗಿದೆ. 1918 ರಲ್ಲಿ ಅಸ್ತಿತ್ವದಲ್ಲಿ ಇದ್ದ ಭೂಮಿ ಆಕರಣೆಗೂ ಮತ್ತು ಪ್ರಸ್ತುತ ಭೂಮಿ ಆಕರಣೆಗೂ ವ್ಯತ್ಯಾಸ ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯಿಂದ ಸರ್ವೆ ನಂ.53/8 ಮತ್ತು

24-07-26

83/9 ರ ಆಸ್ತಿಗಳನ್ನು ಯಾವಾಗ ದುರಸ್ತಿ ಮಾಡಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ಆ ವಿಚಾರವನ್ನು ನಿಪಿ.13 ರಲ್ಲಿ ಉಲ್ಲೇಖಿಸಿಲ್ಲ. ದುರಸ್ತಿ ನಕಾಶೆಯಲ್ಲಿ ತೋರಿಸಿರುವ ಆಕಾರಕ್ಕೂ ಮತ್ತು ಸ್ಥಳದಲ್ಲಿ ಅಸ್ತಿತ್ವದಲ್ಲಿ ಇರುವ ಆಸ್ತಿಯ ಆಕಾರಕ್ಕೂ ವ್ಯತ್ಯಾಸ ಬರುತ್ತದೆ ಎಂದರೆ ಸರಿಯಲ್ಲ. ನಿಪಿ.13 ರಲ್ಲಿ ಸರ್ವೆ ನಂ.53/8 ಮತ್ತು 53/9 ರ ಜಾಗವನ್ನು ಆಜು-ಬಾಜುದಾರರು ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.48, 49, 50, 53/10, 58/7 ರ ಮಾಲೀಕರು ಯಾರು ಎಂದು ವಾದಿ ಬಳಿ ವಿಚಾರಿಸಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ ಯಾವುದೇ ಅಳತೆ ಕಾರ್ಯ ನೆರವೇರಿಸಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಹೇಳಿಕೆಯ ಮೇರೆಗೆ ನಿಪಿ.13 ನ್ನು ಕಚೇರಿಯಲ್ಲೆ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ.8 ರಿಂದ 12 ನ್ನು ಈ ಕೇಸಿಗಾಗಿ ಸೃಷ್ಟಿಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.53/8 ಮತ್ತು 53/9 ರ ಆಸ್ತಿಗಳು ರಸ್ತೆಯ ಮಟ್ಟದಿಂದ ಸುಮಾರು 80 ಅಡಿ ಎತ್ತರದಲ್ಲಿ ಇದೆ ಎಂದರೆ ಸರಿ. ಆ ರೀತಿ ಇಳಿಜಾರು ಇರುವ ಜಾಗ ಸಮತಟ್ಟು ಸಿಗುವುದಿಲ್ಲ ಎಂದರೆ ಸರಿ. ಆ ರೀತಿ ಜಾಗದಲ್ಲಿ ಚೈನ್ ಸಹಾಯದಿಂದ ಕೇಂದ್ರಬಿಂದುವನ್ನು ಗುರುತಿಸಿ ಅದರ ಸಹಾಯದಿಂದ ಅಳತೆ ಮಾಡಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದೇ ರೀತಿ ಅಳತೆ ಮಾಡಿದ್ದೇನೆ ಎನ್ನುತ್ತಾರೆ. ನಿಪಿ.13

24-07-26

ರಲ್ಲಿ ವಿವಾದಿತ ಸ್ಥಳದಲ್ಲಿ ಎಷ್ಟು ಚೈನ್ ಸಮತಟ್ಟು ಸಿಕ್ಕಿದೆ ಎಂದು ಉಲ್ಲೇಖಿಸಿಲ್ಲ ಎಂದರೆ ಸರಿ. ಒಂದು ಸಮತಟ್ಟು ಪ್ರದೇಶದಿಂದ ಮತ್ತೊಂದು ಸಮತಟ್ಟು ಪ್ರದೇಶಕ್ಕೆ ಚೈನ್ ಸಹಾಯದಿಂದ ಅಳತೆ ಮಾಡುವಾಗ ಜಾಗದ ವಿಸ್ತೀರ್ಣ ವ್ಯತ್ಯಾಸವಾಗುತ್ತದೆ ಎಂದರೆ ಸರಿಯಲ್ಲ. ವಾದಿಯ ಪ್ರಭಾವಕ್ಕೆ ಒಳಗಾಗಿ ಸುಳ್ಳು ವರದಿಯನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

24-07-26.

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.